**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಬಂಗಾರಪೇಟೆ**

**ಸಿಸಿ ಸಂಖ್ಯೆ 685**

**ಚಾಸಾಃ 4 ಫ್ರಾಸಾಃ 4**

**ಸಾಕ್ಷಿಯನ್ನು ದಿಃ 24-04-2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ಅಜಿರಾ |
| ಗಂಡ ಹೆಸರುಃ | ಇಮ್ರಾನ್ ಪಾಷ |
| ವಯಸ್ಸುಃ | 26 |
| ವೃತ್ತಿಃ | ಮನೆಕೆಲಸ |
| ವಾಸ ಸ್ಥಳಃ | ಕೆಜಿಎಫ್ |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಆರೋಪಿತನ ಪರಿಚಯ ನನಗೆ ಇರುವುದಿಲ್ಲ. ಶೇಖ್ ಅಹಮದ್ ರವರು ನನ್ನತಂದೆಯಾಗಬೇಕು. ಆ ಸದರಿಯವರು ಅಪಘಾತದಲ್ಲಿ ತೀರಿಕೊಂಡಿರುತ್ತಾರೆ. ನನಗೆ ಅಪಘಾತದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಅಪಘಾತವು ಯಾರ ತಪ್ಪಿನಿಂದ ಹಾಗೂ ಯಾವ ರೀತಿ ಆಗಿರುತ್ತದೆ ಎಂಬುದು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಎ.ಪಿ.ಪಿ.ರವರು ಕೋರಿರುತ್ತಾರೆ. ಅದರಂತೆ ಅನುಮತಿ ನೀಡಿದೆ.)

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿಃ 31-12-2022 ರಂದು ಮಧ್ಯಾಹ್ನ ಸಮಯ ಸುಮಾರು 03-00 ಗಂಟೆಗೆ ಮೃತ ಶೇಖ್ ಅಹಮದ್ ರವರು ಚಾಸಾ-2 ರವರನ್ನು ನೋಡಿಕೊಂಡು ಬರುವುದಾಗಿ ತಮ್ಮ ಎಕ್ಸ್-ಎಲ್ ದ್ವಿಚಕ್ರ ವಾಹನ ಸಂಖ್ಯೆ ಕೆಎ-08-ಇಎ-4079 ರಲ್ಲಿ ವಟ್ರಕುಂಟೆ ಗ್ರಾಮಕ್ಕೆ ಹೋಗಿ ನಂತರ ದಿಃ 01-01-2023 ರಂದು ಸದರಿಯವರು ವಾಪಸ್ ಹೋಗಲು ಮದ್ಯಾಹ್ನ

ಸಮಯ ಸುಮಾರು 01-30 ಗಂಟೆಯಲ್ಲಿ ತಮ್ಮ ದ್ವಿಚಕ್ರ ವಾಹನ ಚಲಾಯಿಸಿಕೊಂಡು ಬಂದು ಕೆಜಿಎಫ್ ಕೋಲಾರ ಮುಖ್ಯ ರಸ್ತೆಯ ಅಣಿಗಾನಹಳ್ಳಿ ಸಮೀಪ ಇರುವ ಎಸ್ ಎನ್ ಸಿಟಿ ಮುಂಭಾಗದಲ್ಲಿ ತಮ್ಮ ದ್ವಿಚಕ್ರ ವಾಹನ ಚಲಾಯಿಸಿಕೊಂಡು ಹೋಗುತ್ತಿದ್ದಾಗ ಕೋಲಾರದ ಕಡೆಯಿಂದ ಕೆಎಸ್‌ಆರ್ ಟಿಸಿ ಬಸ್ ಸಂಖ್ಯೆ ಕೆಎ-07-ಒಎಲ್ 1419 ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಮೃತನ ದ್ವಿಚಕ್ರ ವಾಹನಕ್ಕೆ ಹಿಂದಿನಿಂದ ಡಿಕ್ಕಿ ಹೊಡೆದ ಪರಿಣಾಮ ಮೃತ ಶೇಖ್ ಅಹಮದ್ ರವರು ದ್ವಿಚಕ್ರ ವಾಹನ ಸಮೇತ ಬಸ್ ಕೆಳಗಡೆ ಸಿಲುಕಿ ಬಸ್ಸಿನ ಚಕ್ರವು ಶೇಖ್ ಅಹಮದ್ ರವರ ಮೇಲೆ ಹರಿದು ಆತನ ಎಡಗೈ ಮತ್ತು ಎದೆಯ ಎಡಭಾಗದಲ್ಲಿ ಚಚ್ಚಿದಂತೆ ತೀವ್ರ ಸ್ವರೂಪವಾದ ರಕ್ತಗಾಯಗಳಾಗಿರುವ ಪರಿಣಾಮ ಸದರಿಯವರು ಮೃತ ಪಟ್ಟಿರುತ್ತಾರೆ ಎಂದರೆ ಸರಿಯಲ್ಲ.

ಈಗ ಓದಿ ಹೇಳಿದಂತೆ ದಿನಾಂಕ 01.01.2026 ರಂದು ನಾನು ಪೋಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ-7 ಎಂದು ಗುರುತಿಸಲಾಯಿತು. ಆರೋಪಿಯೊಂದಿಗೆ ರಾಜೀ ಮಾಡಿಕೊಂಡಿದ್ದೇನೆ ಎಂದರೆ ಸರಿ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಪಾಟೀ ಸವಾಲು ಇರುವುದಿಲ್ಲ ಎಂದು ನಿವೇದಿಸಿಕೊಂಡಿರುತ್ತಾರೆ.

**ಮರುವಿಚಾರಣೆಃ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**sd/-**

**(ಸುಕೀತಾ ಎಸ್ ಹದ್ಲಿ)**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಬಂಗಾರಪೇಟೆ